**ಸಾಕ್ಷಿಗೆ ದಿನಾಂಕಃ 12.01.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ. ಪಿ.ಎಸ್. ವಕೀಲರಿಂದಃ</u>**

ನಮ್ಮ ತಂದೆ ಕರಿಬಸವೇಗೌಡ ಮತ್ತು ಅವರ ಮಕ್ಕಳ ನಡುವೆ ವಿಭಾಗ ಆಗಿರುವುದಿಲ್ಲ. 4 ನೇ ದಾವಾ ಸ್ವತ್ತನ್ನು ನಮ್ಮ ಸಹೋದರಿ ನಾಗರತ್ನ ರವರಿಗೆ ನೀಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 4 ನೇ ದಾವಾ ಸ್ವತ್ತು ಈಗಲೂ ನಮ್ಮ ಸಾಕು ತಾತ ಕರಿಬಸವೇಗೌಡ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. 3 ನೇ ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿರುವ ಬಗ್ಗೆ ಕಂದಾಯ ರಶೀದಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ಹೆಸರಿಗೆ ಸದರಿ ಸ್ವತ್ತಿನ ಖಾತೆ ಆಗಿರುವುದಿಲ್ಲ. 3 ಮತ್ತು 4 ನೇ ದಾವಾ ಸ್ವತ್ತು ಮೂಲತಃ ಪುಟ್ಟಲಿಂಗಮ್ಮ ರವರಿಗೆ ವ್ಯವಸ್ಥಾಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. 1 ನೇ ದಾವಾ ಸ್ವತ್ತು ಸುಂದರಮ್ಮ ನವರಿಗೆ ಮಾರಾಟ ಮಾಡಿದ ಬಗ್ಗೆ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. 2 ನೆ ದಾವಾ ಸ್ವತ್ತನ್ನು ಶಿವಯ್ಯ ಎನ್ನುವವರಿಗೆ ನಿ.ಡಿ.9 ರ ಪ್ರಕಾರ ಭೋಗ್ಯ ಮಾಡಿದ್ದೆವು ಹಾಗೂ ಅವರಿಗೆ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದೆವು. ಸದರಿ ಶಿವಯ್ಯನವರ ಹೆಸರಿಗೆ ಆರ್.ಟಿ.ಸಿ. ಆಗಿರುವುದಿಲ್ಲ. ಈ ಸಂಬಂಧ ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ ಬಗ್ಗೆ ನನಗೆ ನೆನಪಿಲ್ಲ. ಶಿವಯ್ಯ ನವರು ನಮಗೆ ಆತ್ಮೀಯ ಎಂದರೆ ಸರಿಯಲ್ಲ. ಸದರಿಯವರಿಗೆ ನಾವುಗಳು 2 ನೇ ದಾವಾ ಸ್ವತ್ತನ್ನು ಭೋಗ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.9 ಮತ್ತು 10 ನ್ನು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ದಾವಾ ಸ್ವತ್ತಿನಲ್ಲಿ ನಾವುಗಳು ಸ್ವಾಧೀನದಲ್ಲಿ ಇಲ್ಲದ ಕಾರಣ ಭೋಗ್ಯ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ದಿ.18.11.1969 ರಂದು ಪುಟ್ಟಮಾದಮ್ಮ ನವರಿಗೆ ಕರಿಬಸವೇಗೌಡ ಮತ್ತು ಸಿದ್ದೇಗೌಡ ಹಾಗೂ ಅವರ ತಂದೆ 2 ನೇ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಕಾರಣ ಸದರಿ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನಮ್ಮ ತಾತನ ಹೆಸರು ಮಾದೇಗೌಡ ಉರುಫ್ ಕುಳ್ಳೇಗೌಡ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.9 ರಿಂದ ನಿ.ಪಿ.12 ರ ದಾಖಲೆಗಳಲ್ಲಿ ನಮೂದು ಮಾಡಿರುವ ಪುಟ್ಟಮಾದಮ್ಮ 5 ನೇ ಪ್ರತಿವಾದಿಯ ತಾಯಿ ಎಂದರೆ ಸರಿ. ನಮ್ಮ ತಂದೆಯನ್ನು ನಮ್ಮ ತಾತ ಕರಿಬಸವೇಗೌಡ ದತ್ತು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯನ್ನು ಕರಿಬಸವೇಗೌಡವರವರು ಸಾಕುಮಗಳಂತೆ ಸಾಕಿದ್ದರು ಎಂದರೆ

ಸರಿಯಲ್ಲ. ವಾದಿಯನ್ನು ಕರಿಬಸವೇಗೌಡ ಮತ್ತು ಪುಟ್ಟಲಿಂಗಮ್ಮ ಶಾಲೆಗೆ ಸೇರಿಸಿದ್ದು, ಶಾಲಾ ದಾಖಲೆಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತುಗಳ ಸ್ವಾಧೀನಾನುಭವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.17ರ ಪ್ರಕಾರ ದಾವಾ ಸ್ವತ್ತುಗಳನ್ನು ಪುಟ್ಟಲಿಂಗಮ್ಮನವರಿಗೆ ವ್ಯವಸ್ಥಾ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿ ಮತ್ತು ಕರಿಬಸವೇಗೌಡ ಮತ್ತು ಪುಟ್ಟಲಿಂಗಮ್ಮ ವ್ಯವಸ್ಥಾ ಪತ್ರ ಬರೆಯುವಾಗ ಜೊತೆಯಲ್ಲಿದ್ದರು ಎಂದರೆ ಸರಿಯಲ್ಲ. ಕರಿಬಸವೇಗೌಡ ಮತ್ತು ಪುಟ್ಟಲಿಂಗಮ್ಮ ತೀರಿಕೊಂಡ ಮೇಲೆ ವಾದಿಯು ದಾವಾ ಸ್ವತ್ತುಗಳ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.16ರ ಪ್ರಕಾರ ಸದರಿಯವರು ವಾದಿಗೆ ಕ್ರಯಪತ್ರವನ್ನು ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸ್ವಾಧೀನವನ್ನು ವಾದಿಯು ಹೊಂದಿದ್ದರೂ ಅದನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಯಾವತ್ತು ಸಹ ಸ್ವಾಧೀನವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**